# *4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು*

*ಎಸ್.ಸಿ.* 160/2023

| | | | |
|---|---|---|---|
| **ಸಾಕ್ಷಿದಾರರ ಹೆಸರು** | ಃ ಶ್ರೀ ಶಶಿಧರ್.ಎಂ.ಎಸ್ | | *ಪ್ರಮಾಣ ಮಾಡಿಸಿದ ದಿನಾಂಕಃ* |
| **ತಂದೆ/ಗಂಡನ ಹೆಸರು** | ಃ ಶ್ರೀ ಸತ್ಯನಾರಾಯಣ | | **18.07.2024** |
| **ವಯಸ್ಸು** | ಃ **53 ವರ್ಷ** | | |
| **ವೃತ್ತಿ** | ಃ ಕಾರು ಚಾಲಕ | **ಪ್ರಾ.ಸಾ.** | ಃ **10** |
| **ವಾಸಸ್ಥಳ** | ಃ ಮೈಸೂರು | **ಚಾ.ಸಾ.** | ಃ **17** |

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

. ಕೆಎ-*09*-ಡಿ-*0929* ಸಂಖ್ಯೆಯ ಮಾರುತಿ ಸ್ವಿಫ್ಟ್ ಕಾರು ನನ್ನದು ಇದೆ. ಆ ಕಾರನ್ನು ನಾನು ಬಾಡಿಗೆಗೆ ಓಡಿಸುತ್ತೇನೆ. ಆ ಕಾರನ್ನು ಈ ಪ್ರಕರಣದ *1* ನೇ ಆರೋಪಿತ ಸೋಮಶೇಖರ ಇವರಿಗೆ ಓಡಿಸಲು ಕೊಟ್ಟಿದ್ದೆ. ಆ ಕಾರನ್ನು ಜುಲೈ *8, 2022* ರಲ್ಲಿ ದೇವರಾಜ ಪೋಲೀಸರು ಅಮಾನತ್ತು ಪಡಿಸಿಕೊಂಡಿದ್ದರು. *1* ನೇ ಆರೋಪಿತ ಸೋಮಶೇಖರ ನಮ್ಮ ಕಾರಿನಲ್ಲಿ ಡ್ರೈವರ್ ಆಗಿ ಕೆಲಸ ಮಾಡುತ್ತಿದ್ದ. ಆ ಕಾರನ್ನು ನಾನು ಪೋ.ಠಾಣೆಗೆ ತಂದು ಹಾಜರುಪಡಿಸಿಲ್ಲ. ಈಗ ಆ ಕಾರನ್ನು ನಾನು ಬಿಡಿಸಿಕೊಂಡಿದ್ದೇನೆ. ನನ್ನ ಕಾರನ್ನು ಪೋಲೀಸರು ಅಮಾನತ್ತು ಪಡಿಸಿಕೊಂಡಾಗ *1* ನೇ ಆರೋಪಿತ ಸೋಮಶೇಖರ ನನಗೆ ಸಿಕ್ಕಿಲ್ಲವಾದ್ದರಿಂದ ಆತನನ್ನು ವಿಚಾರಿಸಿಲ್ಲ. ದಿಃ*21.07.2022* ರಂದು ನಾನು ನನ್ನ ಕಾರನ್ನು ಪೋಲೀಸರಿಂದ ಬಿಡಿಸಿಕೊಂಡಿದ್ದೆ. ಈಗ ನಾನು ನೋಡುತ್ತಿರುವ ನಿ.ಪಿ-*17* ದಾಖಲೆಯಲ್ಲಿನ ಸಹಿ ನನ್ನದೇ ಇದ್ದು ಅದನ್ನು ನಾನು ವಾಹನ ಬಿಡಿಸಿಕೊಳ್ಳುವ ಕಾಲಕ್ಕೆ ಮಾಡಿದ್ದ ಮಹಜರ್ ಕಾಲಕ್ಕೆ ಪಡೆದಿದ್ದರು. ಸದರಿ ಸಹಿಯನ್ನು ನಿ.ಪಿ-*17(ಬಿ)* ಎಂದು ಗುರುತಿಸಿದೆ. ನಿ.ಪಿ-*18* ರಿಂದ *20* ಪೊಟೋದಲ್ಲಿ ಕಾಣುವ

ಕಾರು ನನ್ನದೇ ಇದೆ. ಈಗ ನಾನು ನೋಡುತ್ತಿರುವ ದಾಖಲೆಗಳು ನನ್ನ ಕಾರಿಗೆ ಸಂಬಂದಪಟ್ಟ ಆರ್.ಸಿ, ಇನ್ಸೂರೆನ್ಸ್ ಪಾಲಿಸಿ ಇರುತ್ತವೆ. ಸದರಿ ದಾಖಲೆಗಳನ್ನು ನಿ.ಪಿ-*21* ಮತ್ತು *22* ಎಂದು ಗುರುತಿಸಿದೆ. ನನ್ನ ಕಾರನ್ನು ಯಾವ ಕಾರಣಕ್ಕೆ ಅಮಾನತ್ತು ಪಡಿಸಿಕೊಂಡಿದ್ದರು ಎಂದು ನಾನು ಹೇಳಿಕೆ ಕೊಟ್ಟಿಲ್ಲ. ಈಗ ನಾನು ನೋಡುತ್ತಿರುವ ನಿ.ಪಿ-*13* ದಾಖಲೆಯಲ್ಲಿನ ಸಹಿ ನನ್ನದೇ ಇದೆ ಅದನ್ನು ದಿಃ*08.07.2022* ರಂದು ನನ್ನ ಕಾರನ್ನು ಅಮಾನತ್ತುಪಡಿಸಿಕೊಳ್ಳುವ ಕಾಲಕ್ಕೆ ಪಡೆದಿದ್ದರು. ಸದರಿ ಸಹಿಯನ್ನು ನಿ.ಪಿ-*13(ಬಿ)* ಎಂದು ಗುರುತಿಸಿದೆ.

***ಈ ಹಂತದಲ್ಲಿ, ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.***

***ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ-***

*2.* ದಿಃ*08.07.2022* ರಂದು ಪೋಲೀಸರು ನನ್ನ ಕಾರನ್ನು ಸೋಮಶೇಖರನು ಮೊ.ಸಂಖ್ಯೆ *5/2022* ಪ್ರಕರಣದಲ್ಲಿ ಕೃತ್ಯಕ್ಕೆ ಬಳಸಿಕೊಂಡಿದ್ದರಿಂದ ಕಾರನ್ನು ತೆಗೆದುಕೊಂಡು ಬನ್ನಿ ಎಂದು ತಿಳಿಸಿದ್ದರು ಎಂದರೆ ನಿಜ, ಆ ಕಾಲಕ್ಕೆ ನಾನು ಕಾರನ್ನು ತೆಗೆದುಕೊಂಡು ಪೋ.ಠಾಣೆಗೆ ಹೋದಾಗ ಪೋ.ಠಾಣೆಯಲ್ಲಿದ್ದ ಸೋಮಶೇಖರನು ತನ್ನ ಹೆಂಡತಿಗೆ ಪ್ರಜ್ವಲ್ ನು ಪೋನ್ ಮಾಡಿ ದುಡ್ಡು ಕೊಡುತ್ತೇನೆ ಸೆಕ್ಸ್ ಮಾಡಿಸಿಕೊ ಬಾ ಎಂದು ಕರೆಯುತ್ತಿದುದ್ದರಿಂದ ದಿಃ*13.01.2022* ರಂದು ತಾನು ಮತ್ತು ಮಹದೇವ ನನ್ನ ಕಾರಿನಲ್ಲಿ ಪ್ರಜ್ವಲ್ ಮನೆ ಹತ್ತಿರ ಹೋದಾಗ ಅಲ್ಲಿ ಪ್ರಜ್ವಲ್ ಇಲ್ಲದೇ ಇದುದ್ದರಿಂದ ನಾನು ಪ್ರಜ್ವಲ್ ಗೆ ಇವತುತ ಬುದ್ದಿ ಕಲಿಸುತ್ತೇನೆ ಎಂದು ಹೇಳುತ್ತಿದ್ದಾಗ ಪ್ರಜ್ವಲ್ ನ ತಾಯಿ ಮಮತಾ ನನ್ನ ಮಗನಿಗೆ ಏನು ಮಾಡಬೇಡಿ ನಾನು ಅವನು ಕೆಲಸ ಮಾಡುವ ಜಾಗ ತೋರಿಸುತ್ತೇನೆಂದು ಹೇಳಿ ಅದೇ ಕಾರಿನಲ್ಲಿ ಅದ್ವೈತ ರೆಸಿಡೆನ್ಸಿ ಬಳಿ ಹೋದಾಗ ಮಮತಾ

*SC No. 160/2023*
*PW-10*

ಇವರು ಪ್ರಜ್ವಲ್ ನನ್ನು ಕರೆದುಕೊಂಡು ಬಂದಿದ್ದು ಆ ಕಾಲಕ್ಕೆ ನಾನು ಪ್ರಜ್ವಲ್ ಗೆ ಹೊಡೆಯುತ್ತಿದ್ದು ಮಹದೇವ ಪ್ರಜ್ವಲ್ ಗೆ ಬೈದು ಬೆದರಿಕೆ ಹಾಕುವ ಕಾಲಕ್ಕೆ ನಮ್ಮೊಂದಿಗಿದ್ದ ಪರಮೇಶ ಇಲ್ಲಿ ಗಲಾಟೆ ಬೇಡ ಪೋ.ಠಾಣೆಗೆ ಹೋಗೋಣ ಎಂದು ಹೇಳಿದ್ದರಿಂದ ಪ್ರಜ್ವಲ್ ನು ಯುನಿಫಾರಂ ಬಿಚ್ಚಿ ಬರುವುದಾಗಿ ಹೇಳಿ ಹೋದವನು ನಾವು ಏನಾದರೂ ಮಾಡುತ್ತೇವೆ ಎಂದು ಹೆದರಿ ಅದ್ವೈತ ರೆಸಿಡೆನ್ಸಿ ಮೇಲಿಂದ ಬಿದ್ದು ಆಸ್ಪತ್ರೆಯಲ್ಲಿ ಮರಣಹೊಂದಿದ್ದಾನೆ ಮತುತ ಆ ಕುರಿತು ಮಮತಾ ನಮ್ಮ ಮೇಲೆ ಕೇಸ್ ಹಾಕಿದ್ದಾರೆ ಎಂದು, ಆ ದಿನ ಕಾರನ್ನು ನಿಮ್ಮ ಮನೆ ಬಳಿ ನಿಲ್ಲಿಸಿ ಹೋಗಿದ್ದೆ ಎಂದು ತಿಳಿಸಿದ್ದ ಎಂದರೆ ನಿಜ.  ಆ ನಂತರ ಅವನ ಮೊಬೈಲ್ ಸ್ವಿಚ್ ಆಫ್ ಬಂದಿದ್ದರಿಂದ ನಾನೇ ಕಾರನ್ನು ಓಡಿಸಿಕೊಂಡಿದ್ದೆ ಎಂದರೆ ನಿಜ.  ಈ ಕುರಿತು ಹೇಳಿಕೆ ಕೊಟ್ಟಿದ್ದೆ ಎಂದರೆ ನಿಜ.

ಪಾಟೀ ಸವಾಲು ಃ ಆರೋಪಿ ಪರ ವಕೀಲರು ಸಮಯ ಕೋರಿದ್ದು ಸೂಕ್ತ ಕಾರಣ ಹೇಳದೇ ಇರುವ ಕಾರಣ ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಲಾಯಿತು

ಮರು ವಿಚಾರಣೆಃ- ಇಲ್ಲ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸ ಇ ಎ ಒ.,

*4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
ಮೈಸೂರು